ಶ್ರೀ ಕಡಿದಾಳ್ ಮಂಜಪ್ಪ.—ತಾವು ಯಾವ ಸಂದರ್ಭದಲ್ಲಿ ಆ ರೀತಿ ಹೇಳುತ್ತಿದ್ದೀರೆಂಬುದನ್ನು ನಾನು ಊಹಿಸಬಲ್ಲೆ. ಯಾವುದೋ ಒಂದು ಅಪೀಲ್ ಕೇಸಿನ ಸಂಬಂಧದಲ್ಲಿ ತಾವು ಹೇಳುವಂತೆ ಕಾಣುತ್ತದೆ. ಒಂದೆರಡು ಸಂದರ್ಭಗಳಲ್ಲಿ ಕೊಟ್ಟಿದೆ.

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿ ತಾಲ್ಲೂಕು ಎಲಯೂರು ಗ್ರಾಮದಲ್ಲಿ ಸೆಕ್ರೆಟೇರಿಯಟ್ ಡ್ರೈವರುಗಳಿಗೆ ಜಮೀನು ಕೊಟ್ಟಿಲ್ಲವೆ? ಆ ಗ್ರಾಮದ ರೈತರು ಆ ಜಮೀನನ್ನು ಮೊದಲಿನಿಂದಲೂ ಕೇಳುತ್ತಿದ್ದರೂ ಅವರಿಗೆ ಕೊಡದೆ ಬೇರೆಯವರಿಗೆ ಕೊಡಲು ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Road Repairs in Arsikere in 1951-52 and 1952-53.

Q.—626. **Sri K. PANCHAKSHARIAH** (Arsikere).—

Will the Government be pleased to state :—

(*a*) the amount spent for the roads in Arsikere Taluk during the years 1951-52 and 1952-53 ;

(*b*) whether all the roads in this taluk are being repaired every year;

(*c*) if not, since how many years back they had been repaired ?

A.—**Sri Kadidal MANJAPPA** (Minister for Revenue and Public Works).—

(*a*) Amount spent by the Public Works Department :—

1951-52	...	Rs. 71,475
1952-53	...	Rs. 75,784

(*b*) Repairs of all the State Fund roads are being attended to every year to the extent of grants available.

(*c*) *Does* not arise in view of reply to (*b*).

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ರಸ್ತೆಗಳ ರಿಪೇರಿಗಾಗಿ ಎಷ್ಟು ಎಸ್ಟಿಮೇಟಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—1951-52 ರಲ್ಲಿ 71,475 ರೂಪಾಯಿ ವೆಚ್ಚವಾಗಿದೆಯೆಂದು ಹೇಳಿರುವುದು ಯಾವ ಬಾಬಿಗೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—ಆ ತಾಲ್ಲೂಕಿನ ರಸ್ತೆಗಳು ಬಹಳ ಕೆಟ್ಟಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ರಸ್ತೆಗಳು ಕೆಟ್ಟಿವೆಯೆಂದು ಗೊತ್ತಾಗಿದೆ. ಈ ವರ್ಷ ದುರಸ್ತಿಗುತ್ತವೆ.

ಶ್ರೀ ಕೆ. ಲಕ್ಕಪ್ಪ.—ಅರಸೀಕೆರೆ–ಹುಳಿಯಾರು ರಸ್ತೆ ಸಂಪೂರ್ಣವಾಗಿ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅದನ್ನು ತನಿಖೆಮಾಡಿ ವರದಿ ತರಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತನಿಖೆ ನಡೆಸಬೇಕಾಗಿಲ್ಲ, ತಮ್ಮ ಮಾತಿನಲ್ಲಿ ನಂಬಿಕೆಯಿದೆ.

Middle School Building at Pattanayakanhalli.

Q.—586. **Sri C. T. HANUMANTHAIYA** (Pavagada—Scheduled Castes).—

Will the Government be pleased to state :—

(*a*) the number of years lapsed ever since the amount was granted for the construction of a Middle School building at Pattanayakanahalli, Gowdagere Hobli, Sira Taluk;

(*b*) the reason for not yet constructing the said building ?

A.—**Sri A. G. RAMACHANDRA RAO** (Minister for Law and Education).—

(*a*) The plan and estimate were sanctioned in G.O. No. E. 15231-3—Edn. 45-53-82, dated 12th January 1954.

(*b*) Does not arise in view of reply to item (*a*) above.

ಶ್ರೀ ಸಿ. ಟಿ. ಹನುಮಂತಯ್ಯ.—ಸಿರಾ ತಾಲ್ಲೂಕು, ಗೌಡಗೆರೆ ಹೋಬಳಿ, ಪಟ್ಟನಾಯಕನಹಳ್ಳಿ ಮಿಡ್ಲ್ ಸ್ಕೂಲು ಕಟ್ಟಡ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆದ್ದರಿಂದ ಆ ಕಟ್ಟಡವನ್ನು ಆದಷ್ಟು ಬೇಗ ಕಟ್ಟಿಸಿಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯತ್ನ ಮಾಡುತ್ತೇವೆ.

QUESTIONS FOR ANSWERS ON THE DAY

(Not taken up)

Import and Purchase of Leather Goods in 1952-53.

Q.—58. **Sri T. HANUMIAH** (Hiriyur—Scheduled Castes).—

Will the Government be pleased to state :—